ದಿನಾಂಕಃ 27-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.JP ವಕೀಲರಿಂದ

ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿದ್ದೇನೆ. 2010 ರಲ್ಲಿ ನಾನು 2 ನೇ ಪಾರ್ಟಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೇನೆ. 2 ನೇ ಪಾರ್ಟಿ ಕಂಪನಿಯಲ್ಲಿ ಕೆಲಸಕ್ಕೆ ಸೇರುವ ಮೊದಲು ನಾನು ಪ್ರೈವೇಟ್ನಲ್ಲಿ ಕೆಲಸ ಮಾಡಿದ್ದೇನೆ. 2007-2008 ರಲ್ಲಿ ನಾನು ಟಯೋಟ ಕಿರ್ಲೋಸ್ಕರ್ ಬಿಡದಿ ಕಂಪನಿಯಲ್ಲಿ ನಾನು ಕಾಂಟ್ರಾಕ್ಟ ಬೇಸಿಸ್ನಲ್ಲಿ ಕೆಲಸ ಮಾಡುತ್ತಿದ್ದೆ. 2 ನೇ ಪಾರ್ಟಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ಮೊದಲು ಅರ್ಜಿ ಕೊಟ್ಟು Interview ಮಾಡಿ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. 1 ನೇ ಪಾರ್ಟಿಯ ಯೂನಿಯನ್ನನ್ನು 2014 ರಲ್ಲಿ ಮಾಡಿಕೊಂಡಿದ್ದೇನೆ ಮತ್ತು Trade Union ಕಾರ್ಯಾಲಯಡಿಯಲ್ಲಿ ನೊಂದಣಿ ಮಾಡಿಸಿದ್ದೇನೆ. ರಿಜಿಸ್ಟ್ರೇಷನ್ , ಬೈಲಾ ಮತ್ತು ಜನರಲ್ ಬಾಡಿ ಮೀಟಿಂಗ್ ಮಾಡಿದ ಬಗ್ಗೆ ದಾಖಲಾತಿಗಳು ಇವೆ ಮತ್ತು ನ್ಯಾಯಾಲಯದಲ್ಲಿ ಸದರಿ ದಾಖಲಾತಿಗಳನ್ನು ನಾನು ಹಾಜರು ಮಾಡಿಲ್ಲ. ನಾನು ಯೂನಿಯನ್ನಲ್ಲಿ ಜನರಲ್ ಸೆಕ್ರೆಟರಿ ಆಗಿದ್ದೇನೆ ಅದರ ಆಧಾರದ ಮೇಲೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಜನರಲ್ ಸೆಕ್ರೆಟರಿ ಎಂದು ತೋರಿಸಲು ನಾನು ದಾಖಲಾತಿ ಹಾಜರು ಮಾಡಿಲ್ಲ. ನಮ್ಮ ಯೂನಿಯನ್ನನ್ನು ರಿಜಿಸ್ಟ್ರೇಷನ್ ಮಾಡಿಸುವ ಸಮಯದಲ್ಲಿ 2 ನೇ ಪಾರ್ಟಿಯ ಕಂಪನಿಯ 50 ಜನ ಕೆಲಸಗಾರರು ನಮ್ಮ ಯೂನಿಯನ್ ಸದಸ್ಯರಾಗಿದ್ದರು. ಯೂನಿಯನ್ ಮಾಡುವ ಸಮಯದಲ್ಲಿ ಸದರಿ 50 ಜನ ಕೆಲಸಗಾರರು ಮೀಟಿಂಗ್ನಲ್ಲಿ ಭಾಗವಹಿಸಿದ್ದರು. ಮೀಟಿಂಗ್ನಲ್ಲಿ ಭಾಗವಹಿಸಿದ್ದರು ಎಂದು ತೋರಿಸಲು ದಾಖಲಾತಿ ಇದೆ ಮತ್ತು ಅದನ್ನು ಹಾಜರು ಮಾಡಿಲ್ಲ. ನಾನು ಕೆಲಸಕ್ಕೆ ಸೇರಿದಾಗ ಟ್ರೇನೀ ಆಗಿದೆ ಮತ್ತು ಆಗ ನನಗೆ ರೂ.4000-00 ಸ್ಟೈಫಂಡ್ ಬರುತ್ತಿತ್ತು. 2012 ರಲ್ಲಿ ನನ್ನ ಕೆಲಸ ಖಾಯಂ ಆಗಿದೆ ಮತ್ತು ಆಗ ನನ್ನ ಸಂಬಳ ರೂ.9000-00 ಚಿಲ್ಲರೆ ಬರುತ್ತಿತ್ತು. 2014 ರಲ್ಲಿ ನನ್ನ ಸಂಬಳ ರೂ.13000-00 ಇತ್ತು. ದಿಃ12-02-2018 ರಲ್ಲಿ ನನ್ನ ಸಂಬಳ ರೂ.14000-00 ಚಿಲ್ಲರೆ ಇತ್ತು. ಯೂನಿಯನ್ ಫಾರಂ ಮಾಡಿದಾಗ ಸಂತೋಷ್ ಕುಮಾರ್ Office

bearer, Anand-President, Nagendra-Treasurer, Venkatesh-Vice-president ಆಗಿದ್ದರು. ಮೊದಲು ಹೆಚ್ ಆರ್ ಶೇಷಾದ್ರಿ ಯವರು ಅಡ್ವೈಸರ್ ಆಗಿದ್ದರು. ಯೂನಿಯನ್ ಸದಸ್ಯರ ಪರವಾಗಿ ಹಾಗೂ ನನ್ನ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಯಾರ್ಯಾರು ಯೂನಿಯನ್ನಲ್ಲಿ ಸದಸ್ಯರು ಎಂದು ಲಿಸ್ಟ್ ಇದೆ ಮತ್ತು ಅದನ್ನು ಹಾಜರು ಮಾಡುತ್ತೇನೆ. ಅಂದಾಜು 30 ಜನ ಯೂನಿಯನ್ನಲ್ಲಿ ಇದ್ದಾರೆ. ಸದರಿ 30 ಜನ ಅವರ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಿ ಕಳುಹಿಸಿದ್ದಾರೆ. 30 ಜನರ ಪರವಾಗಿ ಸಿ ಒ ಡಿ ಯನ್ನು ಆಡಳಿತ ಮಂಡಳಿಗೆ ಸಲ್ಲಿಸಿದ್ದೇನೆ. 31 ಡಿಮ್ಯಾಂಡ್ಗಳ ಬಗ್ಗೆ 30 ಜನ ಸದಸ್ಯರ ಜೊತೆ ಚರ್ಚೆ ಮಾಡಿ ಅವರ ಅನುಮತಿ ಪಡೆದು ಸಲ್ಲಿಸಿದ್ದೇನೆ. 30 ಜನರ ಜೊತೆ ಚರ್ಚೆ ಮಾಡಿದ ಬಗ್ಗೆ ಜನರಲ್ ಬಾಡಿ ಮೀಟಿಂಗ್ ದಾಖಲಾತಿ ಇದೆ. ಸದರಿ ಮೀಟಿಂಗ್ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರು ಮಾಡಬಹುದು.

ಕಾಲಾವಕಾಶ ಕೇಳಲಾಯಿತು , ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.